# ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

**ಸಿ. ಸಿ. ನಂಃ1003/2010**

ಪಿಡಬ್ಲ್ಯುಃ 8
ಸಿಡಬ್ಲ್ಯುಃ12

ಸಾಕ್ಷಿಯ ಹೆಸರು ः ಕುಮಿತಾ
ತಂದೆಯ ಹೆಸರು ः ಉಮೇಶ್
ವಯಸ್ಸು ः 40 ವರ್ಷ
ವೃತ್ತಿ ः ಗೃಹಿಣಿ
ವಾಸಸ್ಥಳ ः ಸುಳ್ಯ.

**ದಿನಾಂಕಃ04-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

1. ನನಗೆ ಆರೋಪಿ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ದಾಖಲೆಗಳನ್ನು ಸೃಷ್ಟಿ ಮಾಡಿದ ಬಗ್ಗೆ ಕಣ್ಣಾರೇ ನೋಡಿರುವುದಿಲ್ಲ, ಕಿವಿಯಾರೇ ಕೇಳಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**ಮುಖ್ಯ ವಿಚಾರಣೆ ः ಮುಕ್ತಾಯ**

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲು ः ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

1. ದಿಃ 26-06-2009 ರಂದು ನಾನು ಕೆದಮೂಳ್ಳೂರು ಗ್ರಾಮ ಪಂಚಾಯಿತಿಗೆ ವಾಸ ಮಾಡುತ್ತಿರುವ ಬಗ್ಗೆ ದೃಡೀಕರಣ ಪತ್ರ ನೀಡಬೇಕೆಂದು ಸದರಿ ಗ್ರಾಮ ಪಂಚಾಯಿತಿಗೆ ಅರ್ಜಿಯನ್ನು ಕೊಟ್ಟಿರುತ್ತೇನೆ. ಅದರಂತೆ ಸದರಿ

ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯವರು ನನ್ನ ಸ್ವಳದ ಪರಿಶೀಲನೆ ಮಾಡಿ ಹಾಗೂ ಆಧಾರ್ ಕಾರ್ಡ್ ಪರಿಶೀಲನೆ ಮಾಡಿ ಕ್ರಮ ಸಂಃ 113 ರಲ್ಲಿ ವಾಸಿಸುತ್ತಿರುವ ಬಗ್ಗೆ ದೃಡೀಕರಣ ಪತ್ರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಿಃ31-08-2010 ರಂದು ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನನ್ನನ್ನು ಪೊಲೀಸರು ಕರೆಸಿ ನನಗೆ ಸೇರಿದ ದೃಡೀಕರಣ ಪತ್ರ ಪಡೆದಿರುತ್ತಾರೆ ಮತ್ತು ಆರೋಪಿಯು ನೀಡಿರುವ ದೃಡೀಕರಣ ಪತ್ರವನ್ನು ಪರಿಶೀಲಿಸಿದಾಗ, ಆರೋಪಿಯು ನೀಡಿರುವ ದೃಡೀಕರಣ ಪತ್ರಗಳು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ದಿಃ31-08-2010 ರಂದು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ನಿರಾಕರಿಸಿದ ಕಾರಣ ನಿಪಿ-10 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಮುಕ್ತಾಯ**

**ಮರು ವಿಚಾರಣೆ ಃ ಇಲ್ಲ**

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ ಪಾಟೀಸವಾಲು ಇರುವುದಿಲ್ಲ ಎಂದು ನುಡಿಯುತ್ತಾರೆ.**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓ.ಹೇ.ಕೇ.ಸ.ಇ.

ಸಹಿ/-

**ಪ್ರದೀಪ ಪೋತದಾರ**
**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ವಿರಾಜಪೇಟೆ**